ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 30-05-1971.

***ತಂದೆಯ ಆಜ್ಞೆ ಮತ್ತು ಪ್ರತಿಜ್ಞೆ*** (बाप की आज्ञा और प्रतिज्ञा)

ಬಾಪ್ ದಾದಾ ಆಜ್ಞೆಯನ್ನೂ ಮಾಡುತ್ತಾರೆ ಮತ್ತು ಪ್ರತಿಜ್ಞೆಯನ್ನೂ ಮಾಡುತ್ತಾರೆ. ಆಜ್ಞೆ ಇರುವಂತಹ ಮತ್ತು ಪ್ರತಿಜ್ಞೆಯೂ ಇರುವಂತಹ ಮಹಾವಾಕ್ಯ ಯಾವುದು? ಆಜ್ಞೆ ಮತ್ತು ಪ್ರತಿಜ್ಞೆ ಎರಡೂ ಬರುವಂತಹ ಮಹಾವಾಕ್ಯದ ನೆನೆಪಾಗುತ್ತದೆಯೇ? ಇಂತಹ ಅನೇಕ ಮಹಾವಾಕ್ಯಗಳಿವೆ. ದೊಡ್ಡ ಪಟ್ಟಿ ಇದೆ. ಆದರೆ ಪ್ರಲೋಭನ ಹುಟ್ಟಿಸುವಂತಹ ಮಹಾವಾಕ್ಯ ಯಾವುದೆಂದರೆ, ಒಂದು ಹೆಜ್ಜೆ ನೀವು ಇಡಿ ಆಗ ಬಾಪ್ ದಾದಾ ಸಾವಿರ ಹೆಜ್ಜೆ ಮುಂದೆ ಬರುತ್ತಾರೆ. ಹತ್ತು ಹೆಜ್ಜೆ ಅಲ್ಲ. ಈ ಮಹಾವಾಕ್ಯದಲ್ಲಿ, ಒಂದು ಹೆಜ್ಜೆ ಮುಂದಿಡಿ ಎನ್ನುವ ಆಜ್ಞೆಯೂ ಇದೆ ಮತ್ತು ಬಾಪ್ ದಾದಾ ಸಾವಿರ ಹೆಜ್ಜೆ ಮುಂದಿಡುತ್ತಾರೆ ಎನ್ನುವ ಪ್ರತಿಜ್ಞೆ ಸಹ ಇದೆ. ಇಂತಹ ಉಮಂಗ ಉತ್ಸಾಹ ಕೊಡುವಂತಹ ಮಹಾವಾಕ್ಯಗಳ ಸ್ಮೃತಿ ಸದಾ ಇರಬೇಕು. ಆಜ್ಞೆಯನ್ನು ಪಾಲನೆ ಮಾಡುವುದರಿಂದ ತಂದೆಯ ಪ್ರತಿಜ್ಞೆಯೇನಿದೆ ಅದರಲ್ಲಿ ಸಹಜ ರೀತಿಯಲ್ಲಿ ನೀವು ಮುಂದುವರೆಯಲು ಸಾಧ್ಯವಿದೆ. ಏಕೆಂದರೆ ಪ್ರತಿಜ್ಞೆ ಸಹಾಯದ ರೂಪ ಆಗುತ್ತದೆ. ಒಂದಾಗಿದೆ ನಿಮ್ಮ ಸಾಹಸ ಮತ್ತು ಇನ್ನೊಂದು ಸಹಾಯ - ಇವೆರಡೂ ಸೇರಿದಾಗ ಸಹಜವಾಗುತ್ತದೆ. ಆದ್ದರಿಂದ ಇಂತಹ ಮಹಾವಾಕ್ಯಗಳು ಸದಾ ಸ್ಮೃತಿಯಲ್ಲಿರಬೇಕು. ಸ್ಮೃತಿ ಸಾಮರ್ಥ್ಯವನ್ನು ತರುತ್ತದೆ. ಯಾವ ರೀತಿ ರಜಪೂತರು ಯುದ್ಧಕ್ಕೆ ಹೊರಡುವಾಗ, ಅವರು ಎಷ್ಟೇ ದುರ್ಬಲರಿದ್ದರೂ ಅವರ ಕುಲದ ಸೃತಿಯನ್ನು ತಂದುಕೊಡುತ್ತಾರೆ. ರಜಪೂತರು ಈ ರೀತಿ ಇದ್ದರು, ಅವರು ಈ ರೀತಿ ಮಾಡಿ ಹೋದರು, ಅವರು ಈ ರೀತಿ ಆಗಿಹೋದರು, ನೀವು ಇಂತಹ ಕುಲದವರಾಗಿದ್ದೀರಿ ಸ್ಮೃತಿ ತಂದುಕೊಡುವುದರಿಂದ ಅವರಲ್ಲಿ ಸಾಮರ್ಥ್ಯ ಬರುತ್ತದೆ. ಕೇವಲ ಇಂತಹ ಕುಲದ ಮಹಿಮೆಯನ್ನು ಕೇಳಿ ಕೇಳಿ ಅವರೂ ಸ್ವಯಂ ಮಹಾನ್ ಆಗುತ್ತಾರೆ. ಅದೇ ರೀತಿ ನೀವು ಸೂರ್ಯವಂಶಿ ಆಗಿರುವಿರಿ, ಆ ಸೂರ್ಯವಂಶಿ ರಾಜ್ಯ ಮಾಡುವವರು ಏನಾಗಿದ್ದರು? ಯಾವ ರೀತಿ ರಾಜ್ಯ ಮಾಡಿದರು, ಆ ಸೂರ್ಯವಂಶಿ ರಾಜ್ಯ ಮಾಡುವವರು ಏನಾಗಿದ್ದರು? ಆ ಸ್ಮೃತಿ ಮತ್ತು ಜೊತೆ ಜೊತೆಗೆ ಈಗ ಸಂಗಮಯುಗದ ಈಶ್ವರೀಯ ಸ್ಮೃತಿ. ಈ ಎರಡೂ ಸ್ಮೃತಿ ಬುದ್ಧಿಯಲ್ಲಿ ಬಂದರೆ ಸಾಮರ್ಥ್ಯ ಬರುತ್ತದೆ. ಆ ಸಾಮರ್ಥ್ಯದಿಂದ ಮಾಯೆಯನ್ನು ಎದುರಿಸುವುದು ಸರಳವಾಗುತ್ತದೆ. ಕೇವಲ ಸ್ಮೃತಿಯ ಆಧಾರದಿಂದ, ಅಂದ ಮೇಲೆ ಪ್ರತಿ ಕಾರ್ಯದಲ್ಲಿ ಸಫಲತೆಯನ್ನು ತಂದುಕೊಳ್ಳಲು ಸಾಧನ ಯಾವುದು? ಸ್ಮೃತಿಯಿಂದ ಮೊದಲು ನಿಮ್ಮಲ್ಲಿ ಸಾಮರ್ಥ್ಯವನ್ನು ತಂದುಕೊಳ್ಳಿ. ನಂತರ ಕಾರ್ಯ ಮಾಡಿರಿ. ಎಂತಹದೇ ದುರ್ಬಲತೆ ಇರಲಿ ಆದರೆ ಸ್ಮೃತಿಯ ಆಧಾರದಿಂದ ಆ ಸಮಯದಲ್ಲಿ ಸಾಮರ್ಥ್ಯ ಬರುತ್ತದೆ. ಅವರು ಆ ಕಾರ್ಯಕ್ಕೆ ತಮ್ಮನ್ನು ಯೋಗ್ಯರೆಂದು ತಿಳಿಯದೇ ಇರಬಹುದು ಆದರೆ ಸ್ಮೃತಿಯಿಂದ ಅವರು ತಮ್ಮನ್ನು ಯೋಗ್ಯ ಎಂದು ತಿಳಿದು ಮುಂದೆ ಉಮಂಗ ಉತ್ಸಾಹದಲ್ಲಿ ಬರುತ್ತಾರೆ. ಆದ್ದರಿಂದ ಸರ್ವ ಕಾರ್ಯ ಮಾಡುವ ಮೊದಲು ಈ ಸ್ಮೃತಿ ಇಟ್ಟುಕೊಳ್ಳಿ. ಈಶ್ವರೀಯ ಕುಲ ಮತ್ತು ಭವಿಷ್ಯದ ವಂಶ, ಎರಡರ ಸ್ಮೃತಿ ಬರುವುದರಿಂದ ದುರ್ಬಲತೆ ಎಂದೂ ಬರುವುದಿಲ್ಲ. ದುರ್ಬಲತೆ ಇಲ್ಲವೆಂದಾದರೆ ಅಸಫಲತೆಯೂ ಇಲ್ಲ. ಅಸಫಲತೆಗೆ ಕಾರಣ ದುರ್ಬಲತೆಯಾಗಿದೆ. ಸ್ಮೃತಿಯಿಂದ ಸಾಮರ್ಥ್ಯ ತಂದುಕೊಂಡಾಗ ನಿರ್ಬಲತೆ ಸಮಾಪ್ತ ಆಗುತ್ತದೆ. ಅಸಫಲ ಆಗಲು ಸಾಧ್ಯವಿಲ್ಲ. ಆದ್ದರಿಂದ ಸಫಲತಾಮೂರ್ತಿ ಆಗಲು ನಿಮ್ಮ ಸ್ಮೃತಿಯನ್ನು ಶಕ್ತಿಶಾಲಿ ಮಾಡಿಕೊಳ್ಳಿ, ಆಗ ಸ್ವಯಂ ಆ ಸ್ವರೂಪ ಆಗುತ್ತೀರಿ. ಯಾವ ರೀತಿ ಸ್ಮೃತಿ ಇರುತ್ತದೆಯೋ ಆ ರೀತಿ ತಮ್ಮನ್ನು ಅನುಭವ ಮಾಡುವಿರಿ. ನಾನು ಶಕ್ತಿ ಆಗಿದ್ದೇನೆ ಎನ್ನುವ ಸ್ಮೃತಿ ಇದ್ದಾಗ ಶಕ್ತಿಸ್ವರೂಪರಾಗಿ ಎದುರಿಸಲು ಸಾಧ್ಯವಾಗುತ್ತದೆ. ಆದರೆ, ನಾನು ಪುರುಷಾರ್ಥಿ ಆಗಿದ್ದೇನೆ, ಪ್ರಯತ್ನ ಮಾಡುತ್ತೇನೆ, ಎನ್ನುವ ಸ್ಥಿತಿ ಇದ್ದರೆ ಆಗ ಸ್ವರೂಪವೂ ದುರ್ಬಲತೆಯದಾಗುತ್ತದೆ. ಆದ್ದರಿಂದ ಸ್ಮೃತಿಯನ್ನು ಶಕ್ತಿಶಾಲಿ ಮಾಡಿಕೊಳ್ಳುವುದರಿಂದ ಶಕ್ತಿಯ ಸ್ವರೂಪ ಆಗುತ್ತೀರಿ. ಇದಾಗಿದೆ ಸಫಲತೆ ಪಡೆಯುವ ರೀತಿ, ಆಗ ಇಚ್ಛೆ ಇದ್ದರೂ ಆಗುತ್ತಿಲ್ಲ ಎಂದು ಹೇಳಲು ಸಾಧ್ಯವಿಲ್ಲ.

ಇಚ್ಛೆಯ ಜೊತೆಗೆ ಸಾಮರ್ಥ್ಯವೂ ಬೇಕು ಮತ್ತು ಸಾಮರ್ಥ್ಯ ಬರುವುದು ಸ್ಮೃತಿಯಿಂದ. ಸ್ಮೃತಿ ದುರ್ಬಲ ಇದ್ದರೆ ಯಾವ ಸಂಕಲ್ಪ ಮಾಡುತ್ತೀರೋ ಅದು ಸಿದ್ಧಿಸುವುದಿಲ್ಲ. ಯಾವ ಕರ್ಮ ಮಾಡುತ್ತೀರಿ. ಅದೂ ಸಹ ಸಫಲ ಆಗುವುದಿಲ್ಲ. ಹಾಗಾದರೆ ಸ್ಮೃತಿ ಇಟ್ಟುಕೊಳ್ಳುವುದು ಕಷ್ಟವೋ ಅಥವಾ ಸಹಜವೋ? ಯಾವುದು ಸಹಜ ಆಗಿರುತ್ತದೆಯೋ ಅದು ನಿರಂತರ ಸಹ ಆಗಿರುತ್ತದೆ. ಸ್ಮೃತಿ ನಿರಂತರ ಇದ್ದರೂ ಸಹ ಒಂದಾಗಿದೆ ಸಾಧಾರಣ ಸ್ಮೃತಿ ಮತ್ತು ಇನ್ನೊಂದು ಶಕ್ತಿಶಾಲಿ ಸ್ಮೃತಿ, ಸಾಧಾರಣ ರೂಪದಲ್ಲಿ ಸ್ಮೃತಿ ಇರುತ್ತದೆ ಆದರೆ ಸ್ಮೃತಿ ಶಕ್ತಿಶಾಲಿ ಆಗಿರಬೇಕು. ಹೇಗೆ ನ್ಯಾಯಾಧೀಶನಿರುತ್ತಾನೆ. ಅವನಿಗೆ ಇಡೀ ದಿನ ತಾನು ನ್ಯಾಯಾಧೀಶ ಎನ್ನುವ ನೆನಪಿರುತ್ತದೆ ಆದರೆ ನ್ಯಾಧೀಶನ ಕುರ್ಚಿಯಲ್ಲಿ ಕುಳಿತಾಗ ಇಡೀ ದಿನದ ಆ ಸ್ಮೃತಿ ಶಕ್ತಿಶಾಲಿ ಆಗುತ್ತದೆ. ಕರ್ತವ್ಯದಲ್ಲಿ ತೊಡಗಿದಾಗ ಸ್ಮೃತಿ ಶಕ್ತಿಶಾಲಿಯಾಗಿರುತ್ತದೆ. ಮತ್ತು ಸಾಧಾರಣ ಸ್ಮೃತಿ ಇದ್ದೇ ಇರುತ್ತದೆ. ನೀವೂ ಸಹ ಸಾಧಾರಣ ಸ್ಮೃತಿಯಲ್ಲಿರುತ್ತೀರಿ ಆದರೆ ಶಕ್ತಿಶಾಲಿ ಸ್ಮೃತಿಯಲ್ಲಿರಬೇಕು, ಅದರಿಂದ ಪೂರ್ಣವಾಗಿ ಅದರ ಸ್ವರೂಪ ಆಗಬೇಕು ಮತ್ತು ಸಫಲತೆ ಸಿಗಬೇಕು. ಅದು ಎಷ್ಟು ಸಮಯ ಇರುತ್ತದೆ. ಇದರ ಅಭ್ಯಾಸ ಮಾಡುತ್ತಿರುವಿರಾ? ನಾನು ಈಶ್ವರೀಯ ಸೇವೆಯಲ್ಲಿ ನಿರತನಾಗಿದ್ದೇನೆ ಎಂದು ನಿರಂತರವಾಗಿ ತಿಳಿದುಕೊಳ್ಳಿ. ನೀವು ಅಡಿಗೆ ಮಾಡುತ್ತಿರಬಹುದು. ಅದು ಸ್ಥೂಲ ಕಾರ್ಯ ಆಗಿರಬಹುದು ಆದರೆ ಅಡಿಗೆಯಲ್ಲಿ ಈಶ್ವರೀಯ ಸಂಸ್ಕಾರ ತುಂಬುವುದು, ಭೋಜನವನ್ನು ಶಕ್ತಿಶಾಲಿ ಮಾಡುವುದು, ಇದು ಈಶ್ವರೀಯ ಸೇವೆಯಾಗಿದೆಯಲ್ಲವೆ. ಅನ್ನದಂತೆ ಮನ ಎಂದು ಹೇಳುತ್ತಾರೆ. ಭೋಜನ ತಯಾರು ಮಾಡುವ ಸಮಯದಲ್ಲಿ ಈಶ್ವರೀಯ ಸ್ವರೂಪ ಇದ್ದರೆ ಆಗ ಆ ಅನ್ನದ ಪ್ರಭಾವ ಮನಸ್ಸಿನ ಮೇಲೆ ಆಗುತ್ತದೆ. ಹೀಗೆ ಭೋಜನ ತಯಾರು ಮಾಡುವಾಗಲೂ ಈಶ್ವರೀಯ ಸೇವೆಯಲ್ಲಿರುವಿರಿ ಅಲ್ಲವೆ! ನೀವು ಬರೆಯುತ್ತೀರಿ. ಅಲ್ಲವೆ ಅದರ ಭಾವಾರ್ಥ ಏನು? ನಾವು ಈಶ್ವರೀಯ ಸಂತಾನರು ಸದಾ ಈಶ್ವರೀಯ ಸೇವೆಯಲ್ಲಿ. ಮತ್ತು ಸೇವೆಗೆ ಮಾತ್ರ ಇದ್ದೇವೆ. ಸ್ವರೂಪ ಸ್ಥೂಲ ಸೇವೆಯದಿರಬಹುದು ಆದರೆ ಅದರಲ್ಲಿ ಸದಾ ಈಶ್ವರೀಯ ಸೇವೆಯಲ್ಲಿದ್ದೇನೆ. ಎಲ್ಲಿಯವರೆಗೆ ಈಶ್ವರೀಯ ಜನ್ಮ ಇದೆ ಅಲ್ಲಿಯವರೆಗೆ ಪ್ರತಿ ಸೆಕೆಂಡ್, ಪ್ರತಿ ಸಂಕಲ್ಪ, ಪ್ರತಿ ಕಾರ್ಯ ಈಶ್ವರೀಯ ಸೇವೆಯಾಗಿದೆ. ಆ ಜನರು ಸ್ವಲ್ಪ ಸಮಯ ಕುರ್ಚಿಯ ಮೇಲೆ ಕುಳಿತು ತಮ್ಮ ಸೇವೆ ಮಾಡುತ್ತಾರೆ, ನಿಮ್ಮದು ಆ ರೀತಿ ಇಲ್ಲ. ಸದಾ ನಿಮ್ಮ ಸೇವಾ ಸ್ಥಾನದಲ್ಲಿ ಎಲ್ಲಿಯೇ ಇರಲಿ ಈ ಸ್ಮೃತಿ ಇರಬೇಕು. ಆಗ ದುರ್ಬಲತೆ ಬರಲು ಸಾಧ್ಯವಿಲ್ಲ. ನಿಮ್ಮ ಸೇವೆಯ ಸೀಟನ್ನು ಬಿಡುತ್ತೀರಿ, ಸೀಟು ಬಿಡುವುದರಿಂದ ಸ್ಥಿತಿ ಸಹ ಸ್ಥಿರವಾಗಿರುವುದಿಲ್ಲ. ಸೀಟು ಬಿಡಬಾರದು. ಕುರ್ಚಿಯ ಮೇಲೆ ಕುಳಿತಾಗ ನಶೆ ಬರುತ್ತದೆ. ಸದಾ ನಿಮ್ಮ ಪದವಿಯ ಕುರ್ಚಿಯಲ್ಲಿ ಕುಳಿತುಕೊಂಡರೆ ನಶೆ ಬರುವುದಿಲ್ಲವೆ? ಕುರ್ಚಿ ಅಥವಾ ಸ್ಥಾನವನ್ನು ಏಕೆ ಬಿಡುತ್ತೀರಿ? ಸುಸ್ತಾಗುತ್ತೀರಾ? ಯಾವ ರೀತಿ ನೀವು ರಾಜನ ಚಿತ್ರ ತೋರಿಸಿದ್ದೀರಿ - ಮೊದಲು ಎರಡು ಕಿರೀಟಗಳಿದ್ದವು, ನಂತರ ರಾವಣ ಹಿಂದಿನಿಂದ ಕಿರೀಟವನ್ನು ತೆಗೆದುಬಿಡುತ್ತಾನೆ. ಅದೇ ರೀತಿ ಈಗಲೂ ಆಗುತ್ತದೆಯೇ? ಮಾಯೆ ಈಗಲೂ ಹಿಂದಿನಿಂದ ಸ್ಥಾನದಿಂದ ಇಳಿಸಿಬಿಡುತ್ತದೆ. ಈಗ ಮಾಯೆ ವಿದಾಯ ತೆಗೆದುಕೊಳ್ಳಲು, ಸತ್ಕಾರ ಮಾಡಲು ಬರುತ್ತದೆ. ಆ ರೂಪದಿಂದ ಈಗ ಬರಬಾರದು. ಈಗ ವಿದಾಯ ಹೇಳುತ್ತದೆ. ಯಾವ ರೀತಿ ನೀವು ನಾಟಕ ಮಾಡುತ್ತೀರಿ, ಕಲಿಯುಗ ವಿದಾಯ ತೆಗೆದುಕೊಂಡು ಹೋಗುತ್ತಿದೆ. ಅದೇ ರೀತಿ ಪ್ರಾಕ್ಟಿಕಲ್ ನಲ್ಲಿ ನಿಮ್ಮೆಲ್ಲರ ಬಳಿ ವಿದಾಯ ತೆಗೆದುಕೊಳ್ಳಲು ಬರುತ್ತದೆ, ದಾಳಿ ಮಾಡಲು ಅಲ್ಲ. ಈಗ ಮಾಯೆಯ ದಾಳಿಯಿಂದ ಎಲ್ಲರೂ ಹೊರಗೆ ಬಂದಿರುವಿರಿ. ಈಗಲೂ ಮಾಯೆ ದಾಳಿ ಮಾಡುತ್ತಿದ್ದರೆ ಅತೀಂದ್ರಿಯ ಸುಖದ ಅನುಭವ ಯಾವಾಗ ಮಾಡುವಿರಿ? ಅದನ್ನು ಈಗ ಮಾಡಬೇಕಲ್ಲವೆ. ರಾಜ್ಯ-ಭಾಗ್ಯದ ಅನುಭವ ಭವಿಷ್ಯದಲ್ಲಿ ಮಾಡುವಿರಿ, ಆದರೆ ಅತೀಂದ್ರಿಯ ಸುಖದ ಅನುಭವ ಈಗ ಮಾಡಬೇಕಲ್ಲವೆ. ಮಾಯೆಯ ದಾಳಿ ಆಗುವುದರಿಂದ ಇದನ್ನು ಮಾಡಲು ಸಾಧ್ಯವಿಲ್ಲ. ತಂದೆಯ ಮಕ್ಕಳಾಗಿ ವರ್ತಮಾನ ಅತೀಂದ್ರಿಯ ಸುಖದ ಪೂರ್ಣ ಅನುಭವದ ಪ್ರಾಪ್ತಿ ಮಾಡದಿದ್ದರೆ ಏನು ಮಾಡಿದಂತಾಯಿತು.

ಮಕ್ಕಳು ಅಂದರೆ ಆಸ್ತಿಗೆ ಅಧಿಕಾರಿ. ಆದ್ದರಿಂದ ಸಂಗಮ ಯುಗದ ಶ್ರೇಷ್ಠ ಆಸ್ತಿ ಅತೀಂದ್ರಿಯ ಸುಖ ಸದಾ ಕಾಲ ಪ್ರಾಪ್ತಿ ಆಗುತ್ತಿದೆಯೇ? ಎಂದು ಸದಾ ವಿಚಾರ ಮಾಡಿರಿ. ಅಲ್ಪ ಕಾಲದ ಪ್ರಾಪ್ತಿ ಮಾಡಿದರೆ ಇನ್ನು ಏನು ಅಂತರ ಉಳಿಯಿತು? ಸದಾ ಕಾಲದ ಪ್ರಾಪ್ತಿ ಮಾಡಿಕೊಳ್ಳುವುದಕ್ಕಾಗಿಯೇ ತಂದೆಯ ಮಕ್ಕಳಾಗಿರುವಿರಿ. ಆದರೂ ಅಲ್ಪ ಕಾಲದ ಅನುಭವ ಏಕೆ? ಅಖಂಡ,

ತುಂಡಾಗದ ಅನುಭವ ಆಗಬೇಕು. ಆಗ ಮಾತ್ರ ಅಖಂಡ, ಅಟಲ ಸ್ವರಾಜ್ಯ ಪ್ರಾಪ್ತ ಮಾಡುವಿರಿ. ಅಖಂಡಾವಗಿರುತ್ತದೆಯೇ ಅಥವಾ ಮಧ್ಯ ಮಧ್ಯದಲ್ಲಿ ತುಂಡಾಗುತ್ತದೆಯೇ? ತುಂಡಾಗಿರುವುದನ್ನು ಜೋಡಿಸಿದ್ದು ಮತ್ತು ಪೂರ್ಣ ಅಖಂಡ ವಾಗಿರುವುದರಲ್ಲಿ ಯಾವುದು ಇಷ್ಟ ಆಗುತ್ತದೆ? ಅಖಂಡವಾಗಿರುವುದು ಚೆನ್ನಾಗಿರುತ್ತದೆಯಲ್ಲವೇ. ಈ ಅತೀಂದ್ರಿಯ ಸುಖವೂ ಅಖಂಡ ವಾಗಿರಬೇಕು. ಆಗ ತಂದೆಯ ಆಸ್ತಿಗೆ ಅಧಿಕಾರಿ ಆಗುವಿರಿ. ಒಂದು ವೇಳೆ ಅಖಂಡ, ಅಟಲ ಇಲ್ಲದಿದ್ದರೆ ಏನೆಂದು ತಿಳಿಯಬೇಕು? ಆಸ್ತಿಗೆ ಅಧಿಕಾರಿ ಆಗಿಲ್ಲ ಆದರೆ ಅಲ್ಪ ಸ್ವಲ್ಪ ದಾನ ಪುಣ್ಯದ ರೀತಿಯಲ್ಲಿ ಪ್ರಾಪ್ತಿ ಮಾಡಿಕೊಂಡಿದ್ದಾರೆ, ಅದು ಒಂದೊಂದು ಸಲ ಪ್ರಾಪ್ತಿ ಆಗುತ್ತದೆ. ಆಸ್ತಿ ಸದಾ ನನ್ನ ಪ್ರಾಪ್ತಿ ಆಗಿರುತ್ತದೆ. ದಾನ ಪುಣ್ಯ ಒಂದೊಂದು ಸಲ ಪ್ರಾಪ್ತಿ ಆಗುತ್ತದೆ. ವಾರಸುದಾರ ಆಗಿದ್ದೀರಿ ಅಂದಾಗ ವಾರಸುದಾರರ ಚಿಹ್ನೆ ಆಗಿದೆ - ಅತೀಂದ್ರಿಯ ಸುಖದ ಆಸ್ತಿಗೆ ಅಧಿಕಾರಿ, ವಾರಸುದಾರನಿಗೆ ತಂದೆ ಎಲ್ಲವನ್ನೂ ವೀಲ್ ಮಾಡುತ್ತಾರೆ. ವಾರಸುದಾರ ಅಲ್ಲದವರಿಗೆ ಅಲ್ಪ ಸ್ವಲ್ಪ ಕೊಟ್ಟು ಖುಷಿ ಪಡಿಸುತ್ತಾರೆ. ತಂದೆಯಂತೂ ಪೂರ್ಣವಾಗಿ ವೀಲ್ ಮಾಡುತ್ತಾರೆ. ಯಾರಿಗೆ ತಂದೆಯ ವೀಲ್ ನ ಮೇಲೆ ಪೂರ್ಣ ಅಧಿಕಾರ ಇರುತ್ತದೆಯೋ ಅವರಲ್ಲಿ ಯಾವ ಚಿಹ್ನೆ ಕಂಡು ಬರುತ್ತದೆ? ಅವರು ಸಂಕಲ್ಪ ಶಕ್ತಿ ಇರುವವರಾಗಿರುತ್ತಾರೆ. ಅವರ ಒಂದೊಂದು ಸಂಕಲ್ಪ ದೃಢತಾ ಶಕ್ತಿಯಿಂದ ಕೂಡಿರುತ್ತದೆ. ಸಂಕಲ್ಪ ಶಕ್ತಿ ಇದ್ದರೆ ಎಂದೂ ಅಸಫಲ ಆಗುವುದಿಲ್ಲ. ಪೂರ್ಣವಾಗಿ ವೀಲ್ ಗೆ ಅಧಿಕಾರಿ ಆಗಿರದಿದ್ದರೆ, ಸಂಕಲ್ಪ ಶಕ್ತಿಯೂ ಇರುವುದಿಲ್ಲ. ತಂದೆಯ ಆಸ್ತಿಯನ್ನು ಮತ್ತು ಸಮೃದ್ಧಿಯನ್ನು ತನ್ನ ಆಸ್ತಿಯನ್ನಾಗಿ ಮಾಡಿಕೊಳ್ಳಲು ಬಹಳ ವಿಶಾಲ ಬುದ್ಧಿ ಬೇಕು. ತಂದೆಯ ಆಸ್ತಿಯನ್ನು ನಿಮ್ಮ ಆಸ್ತಿಯನ್ನಾಗಿ ಹೇಗೆ ಮಾಡಿಕೊಳ್ಳುತ್ತೀರಿ? ಎಷ್ಟು ನಿಮ್ಮದಾಗಿಸಿಕೊಳ್ಳುತ್ತೀರಿ ಅಷ್ಟು ನಶೆ ಮತ್ತು ಖುಷಿಯಿರುತ್ತದೆ. ಹಾಗಾದರೆ ತಂದೆಯ ಆಸ್ತಿಯನ್ನು ನನ್ನ ಆಸ್ತಿಯನ್ನಾಗಿ ಮಾಡಿಕೊಳ್ಳುವ ಸಾಧನ ಯಾವುದು? ಅಥವಾ ತಂದೆಯ ಆಸ್ತಿ ತಂದೆಯ ಬಳಿಯೇ ಇರಬೇಕೇ? (ಕೆಲವರು ತಮ್ಮ ತಮ್ಮ ವಿಚಾರ ತಿಳಿಸಿದರು) ಯಾರ ಹೃದಯ ಸತ್ಯವಾಗಿರುತ್ತದೆಯೋ ಅವರ ಮೇಲೆ ಸಾಹೇಬ ರಾಜಿಯಾದರು, ಆದ್ದರಿಂದಲೇ ಆಸ್ತಿ ಕೊಟ್ಟರು. ಆಸ್ತಿಯನ್ನು ಕೊಟ್ಟಿದ್ದಾರೆ, ಈಗ ಅದನ್ನು ನಿಮ್ಮದನ್ನಾಗಿ ಮಾಡಿಕೊಳ್ಳಬೇಕಾಗಿದೆ. ನಿಮ್ಮದನ್ನಾಗಿ ಮಾಡಿಕೊಂಡಾಗ ಸೇವೆ ಅಥವಾ ದಾನವನ್ನು ಮಾಡಲು ಸಾಧ್ಯ. ಎಷ್ಟು ಆಸ್ತಿ ಇರುತ್ತದೆ ಅಷ್ಟು ನಶೆಯಿಂದ ದಾನ ಮಾಡಲು ಸಾಧ್ಯ ಅಥವಾ ಬೇರೆಯವರ ಸೇವೆ ಮಾಡಲು ಸಾಧ್ಯ. ಆದರೆ ಮೊದಲು ಅದನ್ನು ನನ್ನದನ್ನಾಗಿ ಮಾಡಿಕೊಳ್ಳುವುದು ಹೇಗೆ? ನಮ್ಮದನ್ನಾಗಿ ಮಾಡಿಕೊಂಡ ನಂತರ ಬೇರೆಯವರಿಗೆ ದಾನ ಕೊಡುವುದರಿಂದ ಬೆಳೆಯುತ್ತದೆ. ಇದು ನಂತರದ ಮಾತು. ಆದರೆ ಮೊದಲು ನನ್ನದನ್ನಾಗಿ ಮಾಡುವುದು ಹೇಗೆ? ಎಷ್ಟು ಖಜಾನೆ ಸಿಗುತ್ತದೆ ಅಷ್ಟು ಮನನ ಮಾಡುವುದರಿಂದ ಅದು ಒಳಗೆ ಸಮಾವೇಶ ಆಗುತ್ತದೆ. ಯಾರು ಮನನ ಮಾಡುತ್ತಾರೆ ಅವರ ಮಾತಿನಲ್ಲಿಯೂ ದೃಢತೆಯ ಶಕ್ತಿ ಇರುತ್ತದೆ. ಕೆಲವರ ಮಾತಿನಲ್ಲಿ ಶಕ್ತಿಯ ಅನುಭವ ಆಗುತ್ತದೆ, ಏಕೆ? ಎಲ್ಲರೂ ಒಟ್ಟಾಗಿ ಕೇಳುತ್ತಾರೆ. ಆಸ್ತಿ ಸಹ ಎಲ್ಲರಿಗೂ ಒಂದೇ ಸಮಯದಲ್ಲಿ ಒಟ್ಟಾಗಿ ಸಿಗುತ್ತದೆ. ಯಾರು ಮನನ ಮಾಡಿ ಕೊಟ್ಟಿರುವ ಆಸ್ತಿಯನ್ನು ತನ್ನದನ್ನಾಗಿ ಮಾಡುತ್ತಾರೆ. ಅವರಿಗೆ ಏನಾಗುತ್ತದೆ? ಯಾರು ಕುಡಿಯುತ್ತಾರೆ ಅವರಿಗೆ ನಶೆ ಏರುತ್ತದೆ ಎಂದು ಹೇಳುತ್ತಾರಲ್ಲವೆ. ಎಲ್ಲವೂ ಕೇವಲ ಪುನರಾವರ್ತನೆ ಮಾಡುವ ಅಭ್ಯಾಸವಿದೆ. ಮನನ ಮಾಡುವ ಅಭ್ಯಾಸ ಕಡಿಮೆ ಇದೆ. ಎಷ್ಟೆಷ್ಟು ಮನನ ಮಾಡುತ್ತೀರಿ ಅಷ್ಟು ಅರ್ಥಾತ್ ಆಸ್ತಿಯನ್ನು ನಿಮ್ಮದನ್ನಾಗಿ ಮಾಡಿಕೊಳ್ಳುತ್ತೀರಿ ಅಷ್ಟು ನಶೆ ಏರುತ್ತದೆ. ಆ ನಶೆಯಲ್ಲಿ ನೀವು ಯಾರಿಗಾದರೂ ತಿಳಿಸಿದಾಗ ಅವರಿಗೂ ನಶೆ ಏರುತ್ತದೆ. ಇಲ್ಲವಾದರೆ ನಶೆ ಏರುವುದಿಲ್ಲ. ಕೇವಲ ಭಕ್ತರಾಗಿ ಮಹಿಮೆ ಮಾಡುತ್ತೀರಿ, ನಶೆ ಏರುವುದಿಲ್ಲ. ಆದ್ದರಿಂದ ಮನನ ಮಾಡುವ ಅಭ್ಯಾಸ ನಿಮ್ಮಲ್ಲಿ ಹಾಕಿಕೊಳ್ಳಿ. ಆಗ ನಿಮ್ಮ ಮಸ್ತಿಯಲ್ಲಿ ಮಸ್ತರಾಗಿರುವಂತೆ ಕಂಡುಬರುವಿರಿ. ಆಗ ಈ ಜಗತ್ತಿನ ಯಾವುದೇ ವಸ್ತು, ಗೊಂದಲ ನಿಮ್ಮನ್ನು ಆಕರ್ಷಣೆ ಮಾಡುವುದಿಲ್ಲ. ಏಕೆಂದರೆ ನೀವು ನಿಮ್ಮ ಮನನದ ಮಸ್ತಿಯಲ್ಲಿರುತ್ತೀರಿ. ಯಾವ ದಿನ ನೀವು ಮನನದಲ್ಲಿ ಮಸ್ತರಾಗಿರುತ್ತೀರಿ ಅಂದು ಮಾಯೆ ಸಹ ನಿಮ್ಮನ್ನು ಎದುರಿಸುವುದಿಲ್ಲ, ಏಕೆಂದರೆ ನೀವು ವ್ಯಸ್ತವಾಗಿರುತ್ತೀರಿ. ಯಾರಾದರೂ ವ್ಯಸ್ತವಾಗಿದ್ದರೆ, ಬೇರೆಯವರು ಬಂದರೂ ಹೋಗಿಬಿಡುತ್ತಾರೆ. ಯಾವ ರೀತಿ ಅವರು ಭೂಗತರರಾಗುತ್ತಾರಲ್ಲವೆ. (ಅಂಡರಗ್ರೌಂಡ್). ಅದೇ ರೀತಿ ನೀವು ಸಹ ಆಂತರ್ಯದಲ್ಲಿ ಹೋಗುತ್ತೀರಿ. ಭೂಗತ ಆಗುವುದರಿಂದ ಬಾಂಬು ಬಿದ್ದರೂ ಏನೂ ಆಗುವುದಿಲ್ಲ. ಇದೇ ರೀತಿ ಮನನ ಮಾಡುತ್ತಿರುವರಿಂದ, ಅಂತರ್ಮುಖಿಯಾಗಿ ಇರುವುದರಿಂದ ಬಹಿರ್ಮುಖತೆಯ ಮಾತುಗಳು ತೊಂದರೆ ಕೊಡುವುದಿಲ್ಲ.

ದೇಹಾಭಿಮಾನದಿಂದ ಗೈರುಹಾಜರಿ ಆಗುತ್ತದೆ. ಹೇಗೆ ಯಾರದರೂ ತಮ್ಮ ಸೀಟಿನಿಂದ ಗೈರು ಹಾಜರಾಗಿದ್ದರೆ ಜನರು ವಾಪಸ್ ಹೋಗುತ್ತಾರೆ. ನೀವೂ ಸಹ ಮನನದಲ್ಲಿ ಅಥವಾ ಅಂತರ್ಮುಖಿಯಾಗಿರುವದರಿಂದ ದೇಹಾಭಿಮಾನದ ಸೀಟನ್ನು ಬಿಟ್ಟು ಬಿಡುತ್ತೀರಿ, ಆಗ ಮಾಯೆ ವಾಪಸ್ ಹೋಗುತ್ತದೆ, ಏಕೆಂದರೆ ನೀವು ಅಂತರ್ಮುಖಿ ಅರ್ಥಾತ್ ಭೂಗತ ರಾಗಿರುವಿರಿ, ಈಗಿನ ಸಮಯದಲ್ಲಿ ರಕ್ಷಣೆಗಾಗಿ ಭೂಗತರಾಗುತ್ತಾರೆ. ಆದ್ದರಿಂದ ನಿಮಗೂ ಸಹ ರಕ್ಷಣೆಯ ಸಾಧನ ಅಂತರ್ಮುಖತೆಯಾಗಿದೆ ಅರ್ಥಾತ್ ದೇಹಾಭಿಮಾನದಿಂದ ಭೂಗತ ಭೂಗತವಾಗಿರುವುದು ಇಷ್ಟ ಆಗುತ್ತದೆ! ಯಾರಿಗೆ ಅಭ್ಯಾಸ ಇರುವುದಿಲ್ಲವೋ ಅವರು ಸ್ವಲ್ಪ ಸಮಯವಿದ್ದು ಪುನಃ ಬಹರ್ಮುಖತೆಯಲ್ಲಿ ಬರುತ್ತಾರೆ. ಏಕೆಂದರೆ ಅನೇಕ ಜನ್ಮಗಳ ಸಂಸ್ಕಾರ ಬಹಿರ್ಮುಖತೆಯದಾಗಿದೆ. ಆದ್ದರಿಂದ ಅಂತರ್ಮುಖತೆಯಲ್ಲಿ ಕಡಿಮೆ ಇರುತ್ತಾರೆ. ಆದರೆ ನಿರಂತರ ಅಂತರ್ಮುಖಿಯಾಗಿರಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 30-05-1971.

***ತಂದೆಯ ಆಜ್ಞೆ ಮತ್ತು ಪ್ರತಿಜ್ಞೆ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯ ಆಜ್ಞೆಗಳಾದ - "ಒಂದು ಹೆಜ್ಜೆಯನ್ನು ಇಡಿ ಸಾವಿರ ಹೆಜ್ಜೆ ಮುಂದಕ್ಕೆ ನಾನು ನಡೆಸುತ್ತೇನೆ", "ನನ್ನ ಧೈರ್ಯ ಮತ್ತು ತಂದೆಯ ಸಹಾಯ" ಈ ಮಹಾವಾಕ್ಯಗಳನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡು ಸಹಜವಾಗಿ ಯಾವ ಕಾರ್ಯವನ್ನಾದರೂ ಮಾಡಬಲ್ಲೆನು.

2. ನಾನು ಆದಿ ಸೂರ್ಯವಂಶದ (ಸತ್ಯಯುಗ) ಸಂಸ್ಕಾರಗಳನ್ನು ಸಂಗಮ ಯುಗದ (ಈಶ್ವರೀಯ ಮರ್ಯಾದೆಗಳು) ಸಂಸ್ಕಾರಗಳನ್ನು ಸದಾ ಸ್ಮೃತಿಯಲ್ಲಿಟ್ಟು ಸಮರ್ಥವಾಗಿ ಮಾಯೆಯ ಮೇಲೆ ವಿಜಯವನ್ನು ಪಡೆದಿದ್ದೇನೆ.

3. ನಾನು ಶಕ್ತಿಶಾಲಿ ಸ್ಮೃತಿಯಿಂದ ಸಾಧಾರಣ ಸ್ಮೃತಿಯನ್ನು ಸಮಾಪ್ತಿ ಮಾಡಿ ಸಫಲತೆಯನ್ನು ಪಡೆದಿದ್ದೇನೆ.

4. ನಾನು ಯಾವ ಕಾರ್ಯವನ್ನು ಮಾಡುತ್ತಿರುವಾಗಲೂ ಅದರಲ್ಲಿ ಈಶ್ವರೀಯ ಸಂಸ್ಕಾರಗಳನ್ನು ತುಂಬುವುದರಿಂದ ಪ್ರತೀ ಕಾರ್ಯವನ್ನು ಈಶ್ವರೀಯ ಸೇವೆಯಲ್ಲಿ ಪರಿವರ್ತಿಸಿಕೊಳ್ಳುತ್ತಿದ್ದೇನೆ.

5. ನಾನು ಎಲ್ಲಿಯವರೆಗೆ ಈ ಜೀವನ ಇರುತ್ತದೆಯೋ ಅಲ್ಲಿಯವರೆಗೆ ಪ್ರತಿ ಸಂಕಲ್ಪ, ಪ್ರತಿಕ್ಷಣ, ಪ್ರತಿ ಕಾರ್ಯವನ್ನು ಮಾಡುತ್ತಲೂ ಈಶ್ವರೀಯ ಸೇವೆಯಲ್ಲಿ ಇರುತ್ತೇನೆ.

6. ನಾನು ಸೇವೆ ಎಂಬ ಸೀಟಿನ ಮೇಲೆ ಸೆಟ್ಟಾಗಿ, ಕರ್ತವ್ಯ ಎಂಬ ಕುರ್ಚಿಯಲ್ಲಿ ಕುಳಿತು ಮಾಯೆಗೆ ವಿದಾಯವನ್ನು ಕೊಟ್ಟು ಅತೀಂದ್ರಿಯ ಸುಖವನ್ನು ಅನುಭವ ಮಾಡುತ್ತಿದ್ದೇನೆ.

7. ನಾನು ಸಂಗಮ ಯುಗದ ಅತೀಂದ್ರಿಯ ಸುಖವನ್ನು ಸದಾಕಾಲಕ್ಕಾಗಿ ಪ್ರಾಪ್ತಿ ಮಾಡಿಕೊಂಡಿರುವ ಅಚಲ, ಅಖಂಡ ಸ್ವರಾಜ್ಯಾಧಿಕಾರಿ.

8. ನಾನು ತಂದೆಯ ಪೂರ್ತಿ ಅರ್ಪಣೆಗೆ ವಾರಸುದಾರನಾಗಿರುವ, ನನ್ನ ಒಂದೊಂದು ಸಂಕಲ್ಪದಲ್ಲಿ ಆತ್ಮಿಕ ಶಕ್ತಿ ಇರುವ ಸಫಲತಾ ಸ್ವರೂಪ.

9. ನಾನು ತಂದೆಯ ಮಹಾ ವಾಕ್ಯಗಳನ್ನು ಮನನ ಮಾಡಿ ಅಧಿಕಾರಿಯಾಗಿ ನಶೆಯಲ್ಲಿರುವ ಕಾರಣ ಯಾರಿಗಾದರೂ ನಶೆಯ ಅನುಭವವನ್ನು ಮಾಡಿಸಬಲ್ಲೆನು.

10. ನಾನು ವಿಶಾಲ ಬುದ್ಧಿಯಿಂದ ತಂದೆಯ ಆಸ್ತಿ ಅಥವಾ ಸಂಪತ್ತನ್ನು ನನ್ನ ಆಸ್ತಿಯನ್ನಾಗಿ ಮಾಡಿಕೊಂಡು ನಶೆ ಮತ್ತು ಸಂತೋಷದಲ್ಲಿ ಇದ್ದೇನೆ.

11. ನಾನು ಸತ್ಯವಾದ ಹೃದಯದಿಂದ ಯಜಮಾನನನ್ನು (ತಂದೆಯನ್ನು) ರಾಜಿ ಮಾಡಿಕೊಂಡಿದ್ದೇನೆ.

12. ನನಗೆ ಮನನ ಮಾಡುವ ಅಭ್ಯಾಸವಿರುವ ಕಾರಣ ಪ್ರಪಂಚದ ಯಾವ ವಸ್ತುವೂ ನನ್ನನ್ನು ಆಕರ್ಷಿಸಲಾಗುವುದಿಲ್ಲ.

12. ನಾನು ನನ್ನ ಸಂಲಗ್ನತೆಯಲ್ಲಿ ಪೂರ್ಣ ಮಗ್ನವಾಗಿರುವ ಕಾರಣ ಮಾಯೆ ನಮಸ್ಕರಿಸಿ ಹೋಗಿಬಿಡುತ್ತಿದೆ.

13. ನಾನು ನಿರಂತರ ಅಂತರ್ಮುಖಿಯಾಗಿರುವುದರಿಂದ ದೇಹಾಭಿಮಾನದ ಪ್ರಭಾವದಿಂದ ನನ್ನನ್ನು ನಾನು ರಕ್ಷಿಸಿಕೊಳ್ಳುತ್ತಿದ್ದೇನೆ.